ಹೇಳಿದ್ದಾರೆ. ಕೇಂದ್ರಸರ್ಕಾರವು ಇರತಕ್ಕದ್ದು ಮತ್ತು ರಾಜ್ಯ ಸರ್ಕಾರವು ಇರತಕ್ಕದ್ದು ಯಾರಿಗೋಸ್ಕರ? ಅವುಗಳು ಇರತಕ್ಕದ್ದು ನಮ್ಮ ಪ್ರಭುಗಳಿಗೋಸ್ಕರ ನಮ್ಮ ನಾಯಕರುಗಳು ಇದನ್ನು ಅರ್ಥ ಮಾಡಿಕೊಳ್ಳಬೇಕು ಇದೇನು ದೊಡ್ಡ ವಿಚಾರವಾಗುವುದಿಲ್ಲ. ಈಗ ಇರತಕ್ಕ ಸಾಲವನ್ನು ವಜಾ ಮಾಡಬೇಕಾದರೆ ಸರ್ಕಾರ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕು, ಇದೇನು ದೊಡ್ಡ ವಿಷಯವಲ್ಲ ಈಗಾಗಲೇ ಕೆಲವು ರಾಜ್ಯ ಸರ್ಕಾರಗಳವರು ಸಾಲಮನ್ನಾ ಮಾಡುವ ಬಗ್ಗೆ ನಿರ್ಣಯ ಮಾಡಿದ್ದಾರೆ. ಏತಕ್ಕೆ ಮಾಡಿದ್ದಾರೆಂದರೆ ಅಲ್ಲಿ ಅವರುಗಳು ಚುನಾವಣೆಗಳನ್ನು ಎದುರಿಸಬೇಕು. ಅದಕ್ಕೋಸ್ಕರ ಈ ನಿರ್ಣಯವನ್ನು ಮಾಡಿದ್ದಾರೆ, ಇಲ್ಲಿ ನೋಡಿಕೊಳ್ಳೋಣ, ಇನ್ನು ಐದು ವರ್ಷಗಳ ಕಾಲ ಇದೆ. ಈಗ ಯಾವುದು ಚುನಾವಣೆಯನ್ನು ಎದುರಿಸಬೇಕಾಗಿಲ್ಲ, ಚುನಾವಣೆ ಎದುರಿಸಬೇಕಾದ ಸಂದರ್ಭದಲ್ಲಿ ಮಾತ್ರ ಇದರ ಬಗ್ಗೆ ನೋಡೋಣ. ಆಗ ಹೇಳಿಕೆ ಕೊಡೋಣವೆಂಬ ಉದ್ದೇಶವನ್ನು ಇಟ್ಟುಕೊಂಡು ಇವರು ಇದರ ಬಗ್ಗೆ ಏನೂ ಮಾಡುತ್ತಿಲ್ಲ ವೆಂದು ನಾನು ಹೇಳಬೇಕಾಗಿದೆ. ಮುಂದಿನ ಚುನಾವಣೆಯ ಸಂದರ್ಭದಲ್ಲಿ ಮತ್ತೊಂದು ಸಾರಿ ಜನರನ್ನು ಮರಳು ಮಾಡೋಣ ಎಂಬ ಅಭಿಪ್ರಾಯಕ್ಕೆ ಈ ಸರ್ಕಾರ ಬಂದ ಹಾಗೆ ಇದೆ. ಕೇಂದ್ರ ಸರ್ಕಾರದ ವಶದಲ್ಲಿ ನಬಾರ್ಡ್ ಇದೆ. ನಬಾರ್ಡ್‌ನವರಿಗೆ ಕೊಡಬೇಕಾದ ಸಾಲವನ್ನು ನಿಲ್ಲಿಸತಕ್ಕಂಥ ಕೆಲಸವನ್ನು ಮಾಡಲು ಹೋಗಬೇಡಿ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ. ಈ ಸರ್ಕಾರ ಏನಾದರು ಸತ್ತುಹೋಗಿದೆಯೆ ಎಲ್ಲಿದೆ ಸರ್ಕಾರ ? ಸರ್ಕಾರ ಬದುಕಿಲ್ಲ. ಒಬ್ಬರೇ ಒಬ್ಬರು ರಾಜ್ಯಮಂತ್ರಿಗಳು ಇದ್ದಾರೆ. ಒಬ್ಬ ಸಂಪುಟ ದರ್ಜೆಯ ಮಂತ್ರಿಗಳಿಲ್ಲ. ಈ ಸರ್ಕಾರಕ್ಕೆ ಮಾನವಿಲ್ಲ, ಮರ್ಯಾದೆ ಇಲ್ಲ. ಈ ಸರ್ಕಾರಕ್ಕೆ ಮರ್ಯಾದೆ ಇದೆಯೇ ? ರೈತರ ಬಗ್ಗೆ ಚರ್ಚೆ ನಡೆಯುವಾಗ ಮಂತ್ರಿಗಳು ಇಲ್ಲ. ಇದು ರೈತ ವಿರೋಧಿ ಸರ್ಕಾರ. ಮಾನಗೆಟ್ಟ ಸರ್ಕಾರ. ನಿಮಗೆ ನೀತಿನಿಯಮವಂಗಳು ಇವೆಯೇ ? ಇದು ಯಾವ ಸಕ ? ೧೮-೨೨ ನ ಮಂತ್ರಿಗಳಲ್ಲಿ ಒಬ್ಬ ಮಂತ್ರಿ ಆದರೂ ಇಲ್ಲಿ ಕುಳಿತುಕೊಳ್ಳುವುದಕ್ಕೆ ಯೋಗ್ಯತೆ ಇಲ್ಲವೆ ? ನಿಮ್ಮ ಮಂತ್ರಿಗಳು ಎಲ್ಲಿ ಹೋಗಿದ್ದಾರೆಂದು ಕೇಳುತ್ತೇನೆ ? ಸರ್ಕಾರ ಸತ್ತು ಹೋಗಿದೆಯೇ ? ನಿಮ್ಮ ಸರ್ಕಾರಕ್ಕೆ ಯೋಗ್ಯತೆ ಎಲ್ಲಿದೆ ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಮತ್ತು ಆಹಾರ, ನಾಗರಿಕ ಸರಬರಾಜು ರಾಜ್ಯ ಸಚಿವರು).—ನೀವು ಒಬ್ಬರೆ ಅಲ್ಲ, ನಾವೂ ನೋಡಿದ್ದೇವೆ. ನೀವು ಕುಳಿತುಕೊಳ್ಳಿ.

ಶ್ರೀ ವಾಟಾಳ್‌ನಾಗರಾಜ್.—ನಿಮ್ಮ ಸರ್ಕಾರ ಸತ್ತುಹೋಗಿದೆ. ಇದು ರೈತ ವಿರೋಧಿ ಸರ್ಕಾರ. ನಾನು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ರೈತ ವಿರೋಧಿ ಸರ್ಕಾರವಿದು. ಒಬ್ಬ ಮಂತ್ರಿಯೂ ಇಲ್ಲ. ಈ ಸರ್ಕಾರಕ್ಕೆ ಧಿಕ್ಕಾರ.

(ಮಾನ್ಯ ಸದಸ್ಯರು ಈ ಹಂತದಲ್ಲಿ ತಮ್ಮ ಪೀಠದಿಂದ ಎದ್ದುಬಂದು ಮಾತನಾಡುತ್ತಿದ್ದರು ಅವರ ಜೊತೆಯಲ್ಲಿ ನಾಲ್ಕಾರು ಸದಸ್ಯರು ಕೊಡಿಕೊಂಡರು)

ಛೇರ್ಮನ್.—ಒಬ್ಬರು ಮಂತ್ರಿಗಳಂ ಇದ್ದಾರೆ. ತಾವು ಕುಳಿತುಕೊಳ್ಳಿ.

ಶ್ರೀ ಕೆ. ಜೆ. ಜಾರ್ಜ್.—ಇಲ್ಲಿ ನಿಮಗೆ ಇಷ್ಟಬಂದ ಹಾಗೆ ಹೇಳಿಂವುದಲ್ಲ.

(ಈ ಹಂತದಲ್ಲಿ ಮಾತನಾಡುತ್ತಿದ್ದ ಮಾನ್ಯ ವಾಟಾಳ್‌ನಾಗರಾಜ್ ಮತ್ತು ನಾಲ್ಕಾರು ಸದಸ್ಯರು ಗಳು ಸಭಾತ್ಯಾಗ ಮಾಡಿದರು.)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಛೇರ್ಮನ್‌ರವರೆ, ಒಂದು ವಿಷಯದ ಚರ್ಚೆ ನಡೆಸಬೇಕಾದರೆ ಆ ಸಂದರ್ಭದಲ್ಲಿ ಸರ್ಕಾರದ ಪರವಾಗಿ ಸಂಪುಟದರ್ಜೆಯ ಮಾನ್ಯ ಸಚಿವರು ಇರಬೇಕಾದ್ದು ಅವಶ್ಯಕ ಎನ್ನತಕ್ಕದು ಇವಶ್ಯಿನದಲ್ಲ ಅದು ಮೊದಲಿನಿಂದಲೂ ಒಪ್ಪಿಕೊಂಡಿರತಕ್ಕ ತತ್ವ ಸಭೆಯಲ್ಲಿ ಮಂತ್ರಿಗಳು ಇರಬೇಕಾದ ಜವಾಬ್ದಾರಿಯಿದೆ. ಆ ಮಾತು ಹೇಳಿದ್ದೇವೆ. ಈಗಲೂ ಮಾಚ್ಚುಮರೆಯಿಲ್ಲದೆ ಹೇಳುತ್ತೇನೆ. ಈ ವಿಷಯ ಬಹಳ ದೊಡ್ಡದು ಎನ್ನುವುದು ಎಲ್ಲರಿಗೂ ಗೊತ್ತಿದೆ. ಇದು ಸಣ್ಣ ವಿಚಾರವಲ್ಲ. ರೈತನ ಸಾಲ ಮನ್ನಾ ಮಾಡತಕ್ಕದ್ದು ವಸೂಲಿ ತಡೆಹಿಡಿಯತಕ್ಕದ್ದು ಸಣ್ಣ ವಿಚಾರವಲ್ಲ. ಈ ವಿಚಾರ ನಮ್ಮ ಪಕ್ಷ ಆ ಪಕ್ಷಗಳಿಗೆ ಸೇರಿದ್ದಲ್ಲ, ರಾಜ್ಯಮಟ್ಟದ ರಾಷ್ಟ್ರಮಟ್ಟದ ಎಲ್ಲ ರಾಜಕೀಯ ಪಕ್ಷಗಳು ಕೂಡ, ನಬಾರ್ಡ್ ಸಂಸ್ಥೆ ಇರಬಹುದು, ರಿಸರ್ವ್‌ಬ್ಯಾಂಕ್ ಇರಬಹುದು, ರಾಷ್ಟ್ರಮಟ್ಟದಲ್ಲಿ ಹಣ ಕೊಡವಿವವರೆ ಫೈನಾನ್ಸ್ ಮಾಡುವುದಿಲ್ಲ. ಇದು ರಾಜ್ಯಗಳಿಗೆ ಮತ್ತು ಕೇಂದ್ರಸರ್ಕಾರಕ್ಕೆ ಸಂಬಂಧ ಪಟ್ಟದಲ್ಲ. ಇದು ಬಹಳ ದೊಡ್ಡ ವಿಚಾರ. ಈ ಬಗ್ಗೆ ಚಳುವಳಿ ಕೂಡ ನಡೆಯುತ್ತಿದೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಭಾಷಣದ ಮಧ್ಯಾಂತರ ತಮ್ಮ ಅನಿಸಿಕೆಗಳನ್ನು ಹೇಳುವ ಹಕ್ಕು ಇದೆ